(39ನೇ ಪುಟದಿಂದ)
ಪಾರ್ಟಿಯ ಅಧಿಕೃತ ಉಮೇದುವಾರನನ್ನು ಬಿಟ್ಟು ಇನ್ನೊಬ್ಬನನ್ನು, ಅವನು ವಿರುದ್ಧ ಪಕ್ಷದವನೂ ಆಗಬಹುದು, ಅಧ್ಯಕ್ಷಗಿರಿಗೆ ಅವರು ಶಿಫಾರಸು ಮಾಡಬಹುದು.

ಅಂಥ ವಿಶ್ವಾಸದ್ರೋಹ ಕಾನೂನಿನ ದೃಷ್ಟಿಯಲ್ಲಿ ಅಪರಾಧವಲ್ಲವಾದರೂ ಅಪರೂಪದ ಘಟನೆಯೇ. 200 ವರ್ಷಗಳ ಇತಿಹಾಸದಲ್ಲಿ ಕೇವಲ 156 ಆಯ್ಕೆದಾರರು ವಿಶ್ವಾಸಬಾಹಿರವಾಗಿ ವರ್ತಿಸಿದ್ದಾರೆ. ಅದರಲ್ಲಿಯೂ ಹೆಚ್ಚಿನವರು ಪಕ್ಷ ಬಿಟ್ಟು ಹೋಗಿಲ್ಲ. ಚುನಾವಣೆಗೆ ನಿಂತು ಗೆದ್ದವನ ಬದಲಿಗೆ ತಮ್ಮದೇ ಪಾರ್ಟಿಯ ಇನ್ನೊಬ್ಬನನ್ನು ಅನುಮೋದಿಸಿದ್ದಾರೆ. ಪಕ್ಷದ ಹೊರಗೆ ಮತ ಚಲಾಯಿಸಿದ ಕೊನೆಯ ಘಟನೆ ನಡೆದದ್ದು 1972ರಲ್ಲಿ. 538 ಸದಸ್ಯರಲ್ಲಿ ಒಬ್ಬನೇ ಹಾಗೆ ಮಾಡಿದ್ದು. ಈ ಶಿಸ್ತಿಗೆ ಕಾರಣವೆಂದರೆ ಅಮೆರಿಕದ ಅಧ್ಯಕ್ಷ ಆ ದೇಶದ ಪ್ರಧಾನ ಆಡಳಿತಗಾರ, ಅವರ ಪಾರ್ಲಿಮೆಂಟಿನ ಮುಖಂಡನಲ್ಲ. ಅವನ ಆಯ್ಕೆಯಲ್ಲಿ ಶಾಸಕರು ತಮ್ಮನ್ನು ಸಗಟಾಗಿ ಹರಾಜು ಹಾಕಿಕೊಳ್ಳುವ ಯಾವ ಸಂದರ್ಭವೂ ಒದಗುವುದಿಲ್ಲ. ಇಲೆಕ್ಟೋರಲ್ ಕಾಲೇಜುಗಳ ಸದಸ್ಯರು ಪಕ್ಷದ ನಿಷ್ಠಾವಂತ ಕಾರ್ಯಕರ್ತರು ಮಾತ್ರ. ಸೆನೇಟಿನಿಂದ ಹಿಡಿದು ಮುನ್ಸಿಪಾಲ್ಟಿಯವರೆಗೆ ಯಾವ ಹಂತದಲ್ಲಿಯೂ ಜನ ಪ್ರತಿನಿಧಿ ಅಥವಾ ಸರಕಾರಿ ಅಧಿಕಾರದಲ್ಲಿರುವವರಲ್ಲ. ಚುನಾವಣೆ ಮುಗಿದು ಅಧ್ಯಕ್ಷನ ಆಯ್ಕೆಯಾದ ಮೇಲೆ ಕಾಲೇಜುಗಳು ತಮ್ಮಷ್ಟಕ್ಕೆ ಮುಚ್ಚಿಕೊಳ್ಳುತ್ತವೆ. ಸದಸ್ಯರು ತಮ್ಮ ಬದುಕಿಗೆ ವಾಪಸಾಗುತ್ತಾರೆ. ನಡುವೆ ಪಕ್ಷಾಂತರ ಮಾಡುವುದರಿಂದ ಅವರಿಗೆ ಯಾವ ಲಾಭವೂ ಇಲ್ಲ. ಶಾಶ್ವತವಾಗಿ ಕಳಂಕ ಬಡಿದುಕೊಳ್ಳುತ್ತದಷ್ಟೇ. ಇಲೆಕ್ಟರುಗಳು ಗುಂಪಾಗಿ ಮತಾಂತರ ಮಾಡಿದ್ದು ಅವರ ರಾಜಕೀಯ ಇತಿಹಾಸದಲ್ಲಿ ಒಂದೇ ಬಾರಿ – 1836ರಲ್ಲಿ! ವರ್ಜಿನಿಯಾ ರಾಜ್ಯದ 23 ಸದಸ್ಯರು ತಮ್ಮ ಪಕ್ಷದ ಅಭ್ಯರ್ಥಿ ಬಿಳಿಯನಾದರೂ ಒಬ್ಬ ಸವರ್ಣೀಯ ಮಹಿಳೆಯ ಜೊತೆಗೆ ಸಂಸಾರ ಮಾಡಿದ್ದಾನೆಂದು ಅವನನ್ನು ಆರಿಸಲು ನಿರಾಕರಿಸಿದರು. ಹಾಗೆಂದು ಅವನ ಆಯ್ಕೆಯಾಗುವುದೇನೂ ನಿಲ್ಲಲಿಲ್ಲ ಎಂಬ ಮಾತು ಬೇರೆ.

ಇಲೆಕ್ಟ್ರಾನಿಕ್ ಮಾಧ್ಯಮಗಳ ಯುಗದಲ್ಲಿ ಪ್ರಚಾರದ ನಿಯಮಗಳೂ ಬದಲಾಗಿವೆ. ಪ್ರಚಾರ ಹೆಚ್ಚಾಗಿ ನಡೆಯುವುದು ಟೀವಿ ಮತ್ತು ರೇಡಿಯೋ ಜಾಹೀರಾತುಗಳ ಮೂಲಕ. ಒಂದು ಅಂದಾಜಿನ ಪ್ರಕಾರ ಈ ಚುನಾವಣೆಯಲ್ಲಿ ಬರೀ ಅಧ್ಯಕ್ಷೀಯ ಅಭ್ಯರ್ಥಿಗಳೇ 10000 ಕೋಟಿ ರೂಪಾಯಿಗಳನ್ನು ಪ್ರಚಾರಾರ್ಥವಾಗಿ ಖರ್ಚು ಮಾಡಲಿದ್ದಾರೆ. ಅದರಲ್ಲಿ ಹೆಚ್ಚಿನ ಪಾಲು ಟೀವಿ ಕೇಂದ್ರಗಳಿಗೆ. ಎದುರಾಳಿಯನ್ನು ನೇರವಾಗಿ ದೂಷಿಸುವ ನೆಗೆಟಿವ್ ಜಾಹೀರಾತುಗಳ ಪ್ರವಾಹದಲ್ಲಿ ಸತ್ಯಾಸತ್ಯಗಳ ವ್ಯತ್ಯಾಸ ಕೊಚ್ಚಿಕೊಂಡು ಹೋಗುತ್ತದೆ. ಕಳೆದ ಚುನಾವಣೆಯಲ್ಲಿ ಇನ್ನೊಂದು ಹೈ-ಟೆಕ್ ಉಪದ್ರವ ಆರಂಭವಾಗಿದೆ. ಹೊತ್ತು ಗೊತ್ತಿಲ್ಲದಂತೆ ನಿಮ್ಮ ಮನೆಯ ಟೆಲಿಫೋನು ಕಿರುಚತೊಡಗುತ್ತದೆ. ಎತ್ತಿಕೊಂಡರೆ ಆ ತುದಿಯಲ್ಲಿ ಯಾರೂ ಇಲ್ಲ. ಹಸಿ ಸುಳ್ಳುಗಳಿಂದ ತುಂಬಿರುವ ಬೇನಾಮಿ ಸಂದೇಶದ ರಿಕಾರ್ಡು ಕೇಳುತ್ತದೆ. ಆ ಪಾರ್ಟಿಯವನು ಶುದ್ಧ ಲಫಂಗ, ಆತಂಕವಾದಿಗಳ ಬೆಂಬಲಿಗ, ಒಳಗೊಳಗೆ ಕಮ್ಯೂನಿಸ್ಟು, ನಿಮ್ಮ ತೆರಿಗೆಗಳನ್ನು ದುಪ್ಪಟ್ಟು ಮಾಡಲು ಒಳಸಂಚು ಮಾಡಿದ್ದಾನೆ, ಸಂವಿಧಾನ ವಿರೋಧಿ, ಅಮೆರಿಕಾ ದ್ವೇಷಿ, ಅವನು ಆಯ್ಕೆಯಾದರೆ ನಿಮ್ಮ ಗತಿ ನೆಟ್ಟಗಿರೋಲ್ಲ ಹುಷಾರ್ ಎಂಬ ಧಾಟಿಯ ಬೆದರಿಕೆಗಳು. ಆದರೂ ರಾಜಕೀಯದಲ್ಲಿ ಆಸಕ್ತಿ ಇಲ್ಲದವರಿಗೆ ಹೆಚ್ಚು ಕಿರಿಕಿರಿಯಾಗುವುದಿಲ್ಲ ಎಂದೇ ಹೇಳಬೇಕು. ಕರಪತ್ರಗಳನ್ನು ಧಾರಾಳವಾಗಿ ಮುದ್ರಿಸಿದರೂ ಮನೆ ಮನೆಗೆ ಹೋಗಿ ಹೋಗಿ ಕೊಟ್ಟು ಬರುತ್ತಾರೆ ಅಥವಾ ಪೋಸ್ಟು ಮಾಡುತ್ತಾರೆ. ಊರ ಗೋಡೆಗಳ ತುಂಬ ಪೋಸ್ಟರು ಪೇಂಟುಗಳ ರಾಡಿ ಬಳಿಯುವುದಿಲ್ಲ. ಹತ್ತು ಮೈಲು ಕೇಳುವ ಹಾಗೆ ಧ್ವನಿವರ್ಧಕಗಳನ್ನು ನೆಟ್ಟು ನಿಮ್ಮ ನಿದ್ದೆ ಹಾಳು ಮಾಡುವುದಿಲ್ಲ. ಎರಡಕ್ಕೂ ಸ್ಥಳೀಯ ಕಾನೂನುಗಳ ತೀವ್ರ ನಿರ್ಬಂಧವಿದೆ.

## ಮಂತ್ರಿಗಳ ಆಯ್ಕೆ ಹೇಗೆ?

ಅಧ್ಯಕ್ಷನೇನೋ ಜನರಿಂದ ಆಯ್ಕೆಯಾಗುತ್ತಾನೆ. ಆದರೆ ಅವನ ಮಂತ್ರಿ ಮಂಡಳಿ? ಸಂಸತ್ತಿನ ಬಹುಮತ ದೂರವೇ ಉಳಿಯಿತು, ಯಾವ ರಾಜಕೀಯ ಪಕ್ಷಕ್ಕೂ ಸೇರದ ಸ್ವಯಂಪ್ರಭಾವಿಯೂ ಅಧ್ಯಕ್ಷನಾಗಬಹುದಾದರೆ ಅವನ ಮಂತ್ರಿಗಳು ಎಲ್ಲಿಂದ ಬರುತ್ತಾರೆ? ಇಲ್ಲಿಯೂ ಅಮೆರಿಕದ ವ್ಯವಸ್ಥೆ ಭಿನ್ನವಾಗಿದೆ. ಅಲ್ಲಿ 'ಆಡಳಿತ ಪಕ್ಷ' ಎನ್ನುವುದೇ ಇಲ್ಲ. ಕಾಂಗ್ರೆಸ್ಸಿನಲ್ಲಿ ಬಹುಮತ ಇರುವ ಪಕ್ಷಕ್ಕೆ ಆಡಳಿತದಲ್ಲಿ ಹೆಚ್ಚಿನ ಅಧಿಕಾರಗಳೇನೂ ಇಲ್ಲ. ಶಾಸಕರ ಜವಾಬ್ದಾರಿ ಎಂದರೆ ಶಾಸನ. ಅಂದರೆ ಕಾನೂನು ಮಾಡುವುದು, ಸರಕಾರದ ಮೇಲೆ ನಿಗಾ ಇಡುವುದು ಮಾತ್ರ. ಆಡಳಿತ ನಡೆಸುವುದಲ್ಲ. ಬದಲಿಗೆ ಅಧ್ಯಕ್ಷನಿಗೆ ಸಲಹೆ ನೀಡಲು ಹದಿನಾರು ಸಂಪುಟ (ಕ್ಯಾಬಿನೆಟ್ಟು)ಗಳಿವೆ. ಅವುಗಳಿಗೆ ತಕ್ಕ ಕಾರ್ಯದರ್ಶಿಗಳನ್ನು ಆರಿಸುವ ಹಕ್ಕು ಅವನದು. ಈ ಕಾರ್ಯದರ್ಶಿಗಳು ಆಡಳಿತ ತಜ್ಞರು, ಅಧ್ಯಕ್ಷನಿಗೆ ಸಲಹೆ ಕೊಡುವ ಯೋಗ್ಯತೆ ಮತ್ತು ಪರಿಣತಿ ಇರುವ ಸಾರ್ವಜನಿಕರು ಎಂಬ ಆಶಯವಿರುತ್ತದೆ. ಉದಾಹರಣೆಗೆ ಒಬಾಮನ ಶಕ್ತಿ ಖಾತೆಯ ಕಾರ್ಯದರ್ಶಿಯಾಗಿರುವವರು ಸ್ಟೀವನ್ ಚು ಎಂಬ ನೊಬೆಲ್ ಪ್ರಶಸ್ತಿ ವಿಜೇತ ವಿಜ್ಞಾನಿ.

ಎಲ್ಲ ಕ್ಯಾಬಿನೆಟ್ ಸಚಿವರೂ ಇಂಥ ಸಂಪನ್ನರು ಎಂದು ಹೇಳಲಿಕ್ಕಾಗದು. ಜಾರ್ಜ ಬುಶ್‌ನಂಥ ಭ್ರಷ್ಟರು ತಮ್ಮಷ್ಟೇ ಅಯೋಗ್ಯರಾದವರನ್ನು ನಿಯಮಿಸಿಕೊಂಡು ಒದೆ ತಿಂದದ್ದಿದೆ. ಕ್ಯಾಬಿನೆಟ್ ಕಾರ್ಯದರ್ಶಿಗಳೆಂದರೆ ಟೆಂಪರರಿ ಸರಕಾರಿ ಅಧಿಕಾರಿಗಳು, ಅಧ್ಯಕ್ಷನ ಕಾಲಾವಧಿ ಮುಗಿದ ದಿನ ಅವರಿಗೂ ನಿವೃತ್ತಿ. ಚುನಾವಣೆಯ ತೂಗು ಕತ್ತಿಯಿಲ್ಲದೇ ಅವರು ಆಡಳಿತಕ್ಕೆ ಗಮನ ಕೊಡಬೇಕು ಎನ್ನುವುದು ಇದರ ಉದ್ದೇಶ. ಮಂತ್ರಿ ಮಂಡಳದ ರಚನೆಯ ಕಾಲಕ್ಕೆ ಶಾಸಕರ ಜಾಹೀರು ಲೀಲಾವು ನಡೆಯುವುದಿಲ್ಲ. ಎಂಪಿ, ಎಂಎಲ್ಎಗಳ ಗುಂಪುಗಳಿಗೆ ಅಲ್ಲಿ ಅವಕಾಶವಿಲ್ಲ. ಅಕಸ್ಮಾತ್ ಅಂಥವರು ಅಧ್ಯಕ್ಷನಿಂದ ಆಯ್ಕೆಗೊಂಡರೆ ಶಾಸನಸಭೆಗೆ ಮೊದಲು ರಾಜೀನಾಮೆ ನೀಡಿ, ಆಮೇಲೆ ಸಚಿವ ಹುದ್ದೆಯನ್ನು ಸ್ವೀಕರಿಸಬೇಕು. ಇಡೀ ದೇಶಕ್ಕೆ ಕೇವಲ ಹದಿನಾರು ಸಚಿವರೇ! ಎಂದು ನೀವು ಆಶ್ಚರ್ಯ ಪಡಬೇಕಿಲ್ಲ. ಇದೂ ಜಾಸ್ತಿಯಾಯಿತು. ಇಷ್ಟು ದೊಡ್ಡ ಸರಕಾರದ ಭಾರವನ್ನು ಹೊರಲು ನಾವು ತಯಾರಿಲ್ಲ ಎಂದು ಬಲ ಪಂಥೀಯ ಅಮೆರಿಕನ್ನರು ತಕರಾರು ಮಾಡುತ್ತಾರೆ. 'ಸಮಸ್ಯೆಗಳಿಗೆ ಸರಕಾರ ಉತ್ತರವಲ್ಲ, ಸರಕಾರವೇ ಮೂಲಭೂತ ಸಮಸ್ಯೆ' ಎಂದು ಸಾರಿದ ರೇಗನ್ ಅವರ ಆರಾಧ್ಯ ದೈವ. ಸರಕಾರದ ವಿರುದ್ಧ ಅವಿಶ್ವಾಸದ ಹೊರತಾಗಿ ಬೇರಾವ ಗೊತ್ತುವಳಿಯನ್ನೂ ಅವರು ಸ್ವೀಕರಿಸುವುದಿಲ್ಲ. ಹೋದ ವರ್ಷ ರಿಪಬ್ಲಿಕನ್ ಪಕ್ಷದ ಪರವಾಗಿ ನಿಲ್ಲಲು ಹೊರಟಿದ್ದ ರಿಕ್ ಪೆರ್ರಿ ಎಂಬ ಟೆಕ್ಸಾಸ್ ಹುಂಬ ಮಾತೆತ್ತಿದರೆ 'ನಾನು ಅಧ್ಯಕ್ಷನಾದರೆ ಮೊದಲಿಗೆ ಮಾಡುವ ಕೆಲಸ ಮೂರು ಖಾತೆಗಳನ್ನು ತೆಗೆದು ಹಾಕುತ್ತೇನೆ' ಎಂದು ಆರ್ಭಟಿಸುತ್ತಿದ್ದ. ಯಾವುದಪ್ಪ ಆ ಖಾತೆಗಳು ಎಂದು ಕೇಳಿದಾಗ 'ಒಂದು ಪರಿಸರ ಖಾತೆ, ಇನ್ನೊಂದು ಶಿಕ್ಷಣ' ಎಂದು ಉತ್ಸಾಹದಿಂದ ಆರಂಭಿಸಿ 'ಮತ್ತು ಮೂರನೆಯದು ... ಮೂರನೆಯದೇ? ಅದೂ... ಅದೇ... ಅದೇನೋ ಅಂತಾರಲ್ಲ ... ಹಾಳಾದ್ದು' ಎಂದು ತಲೆ ಕೆರೆಯುತ್ತ ನಿಂತುಕೊಂಡ! ಮೂರನೆಯದು ವಾಣಿಜ್ಯ ಇಲಾಖೆಯೆಂದು ಆಮೇಲೆ ಗೊತ್ತಾಯಿತು. ಇದೆಲ್ಲ ರಾಷ್ಟ್ರೀಯ ದೂರದರ್ಶನದ ನೇರ ಪ್ರಸಾರದಲ್ಲಿ ನಡೆದದ್ದರಿಂದ ಅವನ ಉಮೇದುವಾರಿಕೆ ಅಲ್ಲಿಗೇ ಮುಗಿಯಿತು.

ರಿಪಬ್ಲಿಕನ್ ಪಕ್ಷದವರೆಲ್ಲ ಈ ಪೆರ್ರಿಯಷ್ಟೇ ಪೆದ್ದರೆಂದು ತಿಳಿಯಕೂಡದು. ಅವನಪ್ಪನಂಥ ಅವಿವೇಕಿಗಳು ಅಲ್ಲಿ ಧಾರಾಳವಾಗಿದ್ದಾರೆ. ಆದರೆ ವಿವೇಕಕ್ಕೂ ಚುನಾವಣೆಗಳಿಗೂ ಯಾವ ದೇಶದಲ್ಲಿ ಸಂಬಂಧವಿದೆ? ಒಬಾಮಾ ಹಾರ್ವರ್ಡ್ ವಿಶ್ವವಿದ್ಯಾಲಯದ ಪದವೀಧರ, ಸಂವಿಧಾನ ತಜ್ಞ. ಅವನ ವಿರುದ್ಧ ನಿಂತಿರುವ ಮಿಟ್ ರೊಮ್ನೆ ಯಶಸ್ವೀ ಉದ್ಯಮಿ. ಅವನ ಯಶಸ್ಸು ಉದ್ಯಮಗಳನ್ನು ಬೆಳೆಸುವುದರಲ್ಲಿ ಅಲ್ಲ, ಅವುಗಳನ್ನು ದಿವಾಳಿಯೆಬ್ಬಿಸಿ ಸ್ವಂತಕ್ಕೆ ದುಡ್ಡು ಮಾಡಿಕೊಳ್ಳುವುದರಲ್ಲಿದೆ ಎಂದು ಡೆಮೊಕ್ರಾಟರು ಎಷ್ಟೇ ದೂರಿದರೂ ಅಮೆರಿಕನ್ನರಿಗೆ ರಾಜಕೀಯ ಮುತ್ಸದ್ದಿತನಕ್ಕಿಂತ ವ್ಯಾವಹಾರಿಕ ಯಶಸ್ಸಿನ ಮೇಲೆ ಹೆಚ್ಚಿನ ಭರವಸೆ. ಜೊತೆಗೆ ಪಾಲ್ ರ್‍ಯಾನ್ ಎಂಬ ಪ್ರಚ್ಛನ್ನ ಆರ್ಥಿಕ ಸನಾತನಿಯನ್ನು ಉಪ ರಾಷ್ಟ್ರಪತಿಯಾಗಿ ಆಯ್ದುಕೊಂಡಿದ್ದಾನೆ. ಇಷ್ಟು ವರ್ಷ ತಾವು ಪ್ರತಿಪಾದಿಸಿದ ಅಸಂಬದ್ಧ, ಅಪಾಯಕಾರಿ ಧೋರಣೆಗಳಿಗೆ ಬಗೆ ಬಗೆಯ ಬಣ್ಣ ಬಳಿಯುವ ಪ್ರಯತ್ನದಲ್ಲಿ ಇಬ್ಬರೂ ತೊಡಗಿದ್ದಾರೆ. ಒಂದು ಕಡೆ ಪ್ರಗತಿಶೀಲರಿಂದ, ಇನ್ನೊಂದು ಕಡೆ ಪ್ರತಿಗಾಮಿಗಳಿಂದ ಒದೆ ತಿನ್ನುತ್ತ ನಡುವಿನ ತ್ರಿಶಂಕುಗಳನ್ನು ಒಲಿಸಿಕೊಳ್ಳಲು ಒಬಾಮ ತಿಣುಕುತ್ತಿದ್ದಾನೆ. 270ರ ಮಾಂತ್ರಿಕ ಸಂಖ್ಯಾಬಲ ಯಾರಿಗೆ ಕೂಡಿ ಬರುತ್ತದೋ ನೋಡಬೇಕು. ಒಬಾಮಾ ಮತ್ತೆ ಗೆಲ್ಲಬಹುದೆ?

(ಲೇಖಕರು ಕ್ಯಾಲಿಫೋರ್ನಿಯಾದಲ್ಲಿದ್ದಾರೆ.)